ಶ್ರೀ ಆರ್. ವೆಂಕಟರಾವಂಯ್ಯ. -ಇದು ೨ ಲಕ್ಷ ಜನರ ಸವಂಸ್ಯೆಯಾಗಿದೆ.

ಅಧ್ಯಕ್ಷರು.—ಇಲ್ಲ, ಸಾಧ್ಯವಿಲ್ಲ.

(ಗೊಂದಲ)

೧–೩೦ ಪಿ. ಎಂ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಕಾರ್ಮಿಕ ವಿರೋಧಿ ನೀತಿಯನ್ನು ಸರ್ಕಾರ ಏನು ಅನುಸರಿಸುತ್ತಿದೆ, ಸರ್ಕಾರದ ನೀತಿಯಂ ವಿರುದ್ಧವಾಗಿ ಆದನ್ನು ಪ್ರತಿಭಟನೆ ಮಾಡುತ್ತಾ ನಾವು ಸಭೆಯಿಂದ ಹೊರಗೆ ಹೋಗುತ್ತಿದ್ದೇವೆ. ಕಳೆದ ೫ ದಿವಸಗಳಿಂದಲೂ ಅವರು ಸತ್ಯಾಗ್ರಹ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಇದು ಪಂಚತ್ವದ ಸಭೆ. ಸಂಮ್ಮನೆ ಕಾಲಾಹರಣ ಮಾಡುವುದು ಬೇಡ.

(ಗೊಂದಲ)

ಅಧ್ಯಕ್ಷರು.—ನೀವು ಹೀಗೆ ಮಾತನಾಡುತ್ತಿದ್ದರೆ ಸದನದಿಂದ ಹೊರಗೆ ಹೋಗಿ ಎಂಬುದಾಗಿ ಹೇಳ ಬೇಕಾಗುತ್ತದೆ. Please withdraw from the House.

(Interruptions)

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರಾದ ಶ್ರೀ ಬಿ. ಎಸ್. ಯಡಿಯೂರಪ್ಪ ಹಾಗೂ ಶ್ರೀ ವಸಂತ ಬಂಗೇರ ರವರು ಸದನ ದಿಂದ ಹೊರಗೆ ಹೋದರು).

ಶ್ರೀ ಕೆ. ಬಿ. ಶ್ಯಾನಪ್ಪ.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.—ಈ ರೀತಿ ಮಾತನಾಡುವುದಕ್ಕೆ ನಿಮಗೆ ಅವಕಾಶ ಇಲ್ಲ. ಅವರು ೬೬ ಜನ ಕಾಂಗ್ರೆಸ್ ಸದಸ್ಯರಿದ್ದರೂ ಎಷ್ಟು ಒಳ್ಳೆಯ ರೀತಿಯಿಂದ ನಡೆದುಕೊಳ್ಳುತ್ತಾರೆ ನೋಡಿ.

(ಗೊಂದಲ)

ಶ್ರೀ ಕೆ. ಬಿ. ಶ್ಯಾನಪ್ಪ.—ನಾನೂ ಕೂಡ ಗಮನ ಸೆಳೆಯುವ ಸೂಚನೆಯನ್ನು ಈ ಬಗ್ಗೆ ಕೊಟ್ಟಿದ್ದೇನೆ. ಅದು ಏನಾಯಿತು, ಅದನ್ನು ಹೇಳಿ.

(ಗೊಂದಲ)

ಗಮನ ಸೆಳೆಯುವ ಸೂಚನೆ

(1) ಬೆಂಗಳೂರಿನಲ್ಲಿರುವ ಜಗಜೀವನರಾಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿ ನಿಲಯಕ್ಕೆ ಅಮಿನಿಟಿ ಗ್ಯಾಂಟನ್ನು ನಿಲ್ಲಿಸಿರುವುದರಿಂದ ತೊಂದರೆಯಾಗಿರುವ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಬೆಂಗಳೂರಿನಲ್ಲಿರುವ ಜಗಜೀವನರಾಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿ ನಿಲಯದ ೨೦೦ ಹೆಣ್ಣು ಮಕ್ಕಳಿಗೆ ಮಂಜೂರು ಮಾಡುತ್ತಿದ್ದ ಸೌಕರ್ಯ ಅನುದಾನ ಯೋಜನೆಯನ್ನು ಹಣದ ಕೊರತೆಯಿಂದಾಗಿ ಕೈಬಿಟ್ಟಿರುವುದರಿಂದ ವಿದ್ಯಾರ್ಥಿನಿಯರಿಗೆ ಆಗಿರುವ ತೊಂದರೆಯ ಬಗ್ಗೆ ಸಮಾಜ ಕಲ್ಯಾಣ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ವಿ.ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ೨೨೨ ಅನುದಾನಿತ ವಿದ್ಯಾರ್ಥಿ ನಿಲಯಗಳಿವೆ. ಈ ಎಲ್ಲಾ ವಿದ್ಯಾರ್ಥಿ ನಿಲಯಗಳಿಗೆ ಪ್ರತಿ ವರ್ಷ ಕೊಡುವಂತೆ ಈ ವರ್ಷವೂ ಊಟ ಮತ್ತು ವಸತಿ ಅನುದಾನಗಳನ್ನು ಕೊಡ ಲಾಗುತ್ತಿದೆ. ಸಿಬ್ಬಂದಿ ವೆಚ್ಚವನ್ನೂ ಕೊಡಲಾಗುತ್ತಿದೆ, ಶ್ರೀ ಜಗಜೀವನ ರಾಮ ವಿದ್ಯಾರ್ಥಿನಿ ವಂದಿರಕ್ಕೆ ಇವೇ ಅನುದಾನಗಳನ್ನು ಈ ವರ್ಷವೂ ಎಂದಿನಂತೆ ಬಿಡುಗಡೆ ಮಾಡಲಾಗಿದೆ, ಈ ಅನು ದಾನಕ್ಕೆ ಹಣದ ಕೊರತೆ ಇಲ್ಲ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿಮ್ನ ವರ್ಗದ ಅನುದಾನಿತ ವಿದ್ಯಾರ್ಥಿ ನಿಲಯಗಳಿಗೆ ಅನುದಾನದ ಜೊತೆಗೆ ಅಮಿನಿಟಿ ಗ್ರ್ಯಾಂಟ್ ರೂಪದಲ್ಲಿ ಪ್ರತಿ ವಿದ್ಯಾರ್ಥಿಗೆ ತಲಾ ಎರಡು ಜೊತೆ ಉಡುಪು ಮತ್ತು ಪಠ್ಯ ಪುಸ್ತಕ ಹಾಗೂ ಇತರೆ ಸಾಮಗ್ರಿಗಳನ್ನು ೮ನೇ-೮ಳ ಮತ್ತು ೮ನೇ ತರಗತಿಗಳಲ್ಲಿ ಒದಗಿಸಲಾಗಿತ್ತು. ಆದರೆ, ಈ ಸಾಲಿನಲ್ಲಿ (೮೫-೮೬) ಸರ್ಕಾರದ ವಿದ್ಯಾ ವಿಕಾಸ ಯೋಜನೆಯಲ್ಲಿ ಅಂದರೆ ಉಚಿತವಾಗಿ ಸಮವಸ್ತ್ರ, ಪಠ್ಯಪುಸ್ತಕ ಹಾಗೂ ಇತರೆ ಸಾಮಗ್ರಿಗಳನ್ನು ಶಾಲಾ ಮಕ್ಕಳಿಗೆ ಒದಗಿಸಲು ಶಿಕ್ಷಣ ಇಲಾಖೆಗೆ ಈ ಇಲಾಖೆಯ ಆಯವ್ಯಯದಲ್ಲಿ ರೂ. ೩೦೦-೦೦ ಲಕ್ಷರೂಪಾಯಿಗಳನ್ನು ನೀಡಲಾಗಿರುವ ಕಾರಣ ಈ ಯೋಜನೆಗಾಗಿ ಪ್ರತ್ಯೇಕವಾಗಿ ಹಣವನ್ನು ಮುಡಿಪಾಗಿಟ್ಟಿಲ್ಲ.

ಈಗಾಗಲೇ ಶಿಕ್ಷಣ ಇಲಾಖೆಯಿಂದ ಬಂದಿರುವ ಮಾಹಿತಿಯ ಪ್ರಕಾರ ರಾಜ್ಯದಲ್ಲಿ ಒಟ್ಟು ೨೨,೫೬,೭೬೪ ವಿದ್ಯಾರ್ಥಿಗಳಿಗೆ (೧ನೇ ತರಗತಿಯಿಂದ ೭ನೇ ತರಗತಿಯ ಶಾಲಾ ಮಕ್ಕಳಿಗೆ) ಸಮವಸ್ತ್ರ ಒದಗಿಸಿದ್ದು ರೂ. ೧,೨೬೦-೨೫ ಲಕ್ಷದಷ್ಟು ಹಣವನ್ನು ಖರ್ಚು ಮಾಡಿದೆ ಮತ್ತು ಉಚಿತ ಪಠ್ಯಪುಸ್ತಕಗಳ ಸರಬರಾಜಿಗಾಗಿ ರೂ. ೪೧೧:೫೦ ಲಕ್ಷದಷ್ಟು ಹಣವನ್ನು ಸಹ ಖರ್ಚು ಮಾಡಲಾಗಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ೧ನೇ ತರಗತಿಯಿಂದ ೭ನೇ ತರಗತಿಯವರೆಗಿನ ಶಾಲಾ ಮಕ್ಕಳಿಗೆ ಸಮವಸ್ತ್ರ ಒದಗಿಸಲಾಗಿದೆ ಎಂಬುದಾಗಿ ಹೇಳಿದ್ದಾರೆ. ಜನರಲ್ಲಾಗಿ ಈ ಒಂದು ಕಾರ್ಯಕ್ರಮವನ್ನು ವಿದ್ಯಾ ಇಲಾಖೆಯ ಮತಿಯಿಂದ ಮಾಡಲಾಗುತ್ತಿದೆ ಆದರೆ ನಾನು ಕೇಳಿರುವಂಥದ್ದಕ್ಕೂ ಇದಕ್ಕೂ ಸಂಬಂಧವಿಲ್ಲ. ಸಮಾಜಕಲ್ಯಾಣ ಇಲಾಖೆಯಮತಿಯಿಂದ ಇವರಿಗಾಗಿ ಪ್ರತ್ಯೇಕವಾಗಿ ಹಿಂದೆ ಅಮಿನಿಟೀಸ್ ಗ್ರ್ಯಾಂಟ್ ಎಂಬುದಾಗಿ ಏನು ಕೊಡುತ್ತಾ ಇದ್ದರು, ಆ ಗ್ರ್ಯಾಂಟನ್ನು ಈ ವರ್ಷದಿಂದ ತಡೆಹಿಡಿದಿದ್ದೀರಿ. ಇದರಿಂದ ಏನಾಗಿದೆ ಎಂದರೆ, ಹೈಸ್ಕೂಲಿನಲ್ಲಿ ರತಕ್ಕಂತಹ ಹೆಣ್ಣು ಮಕ್ಕಳಿಗೆ ತೊಂದರೆಯಾಗಿದೆ. ೧ನೇ ತರಗತಿಯಿಂದ ೭ನೇ ತರಗತಿಯವರೆಗೆ ಎಲ್ಲ ಶಾಲಾ ಮಕ್ಕಳಿಗೆ ವಿದ್ಯಾ ಇಲಾಖೆಯ ಮತಿಯಿಂದ ಸಮವಸ್ತ್ರ ಹಾಗೂ ಪಠ್ಯ ಪುಸ್ತಕಗಳನ್ನು ಕೊಡುವಂತಹ ಕಾರ್ಯಕ್ರಮವನ್ನು ಜಾರಿಗೆ ತಂದು ಆ ಕಾರ್ಯಕ್ರಮವನ್ನು ಇಂಪ್ಲಿಮೆಂಟ್ ಮಾಡುವುದಾದರೆ, ಎಲ್ಲರಿಗೂ ಕೊಡಲೇಬೇಕಾಗುತ್ತದೆ. ಆದರೆ ಅದು ಅಮಿನಿಟೀಸ್ ಗ್ರ್ಯಾಂಟ್ ಅಲ್ಲ. ಅವರಿಗೆ ವಿಶೇಷವಾಗಿ ಅಮಿನಿಟೀಸ್ ಗ್ರ್ಯಾಂಟ್ ಎಂಬುದಾಗಿ ಏನಂ ಸಿಕ್ಕುತ್ತಾ ಇತ್ತು ಅದನ್ನು ನೀವು ತಪ್ಪಿಸಿದ್ದೀರಿ ಅದಕ್ಕಾಗಿ ಇದನ್ನು ಕೊನೇ ಪಕ್ಷ ಪುನರ್ ಪರಿಶೀಲನೆ ಮಾಡಿ, ಅವರಿಗೆ ಈ ಒಂದು ಗ್ರ್ಯಾಂಟ್‌ನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡುತ್ತೀರೋ ಹೇಗೆ?

ಶ್ರೀ ವಿ.ಎಲ್. ಪಾಟೀಲ್.—ಈಗಾಗಲೇ ೩೦೦ ಲಕ್ಷ ರೂಪಾಯಿಗಳನ್ನು ಈ ಬಾಬಿಗಾಗಿ ವಿದ್ಯಾ ಇಲಾಖೆಗೆ ಬಿಡುಗಡೆ ಮಾಡಲಾಗಿದೆ. ಆದರೂ ಮಾನ್ಯ ಸದಸ್ಯರು ಏನು ಸೂಚನೆ ಮಾಡಿದ್ದಾರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—೩೦೦ ಲಕ್ಷ ರೂಪಾಯಿಗಳನ್ನು ವಿದ್ಯಾ ಇಲಾಖೆಗೆ ಬಿಡುಗಡೆ ಮಾಡಿರುವಂತಹದ್ದು ಜನರಲ್ಲಾಯಿತು. ನಾನು ಹೇಳುತ್ತಿರುವುದನ್ನು ತಾವು ಸಲ್ಪ ಆರ್ಥಮಾಡಿಕೊಳ್ಳಿ ಅಮಿನಿಟೀಸ್ ಗ್ರ್ಯಾಂಟ್ ಎಂಬುದಾಗಿ ವಿಶೇಷವಾಗಿ ಕೆಲವೇ ಸಂಸ್ಥೆಗಳಿಗೆ ಕೊಡುತ್ತಿದ್ದಂತಹದ್ದು. ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಬರುತ್ತಿರತಕ್ಕಂಥದ್ದನ್ನು ನೋಡಿ, ಅದನ್ನು ಇನ್ಸ್‌ಪೆಕ್ಷನ್ ಮಾಡಿ ಕೊಂಡು ಬಂದು ಅಲ್ಲಿ ವ್ಯಾಸಂಗ ಮಾಡುವಂತಹ ಹೈಸ್ಕೂಲು ಹೆಣ್ಣು ಮಕ್ಕಳಿಗೆ ಬಟ್ಟೆ ಕೊಡತಕ್ಕಂಥದ್ದು. ಇದನ್ನು ಈಗ ಏಕೆ ನಿಲ್ಲಿಸಿದ್ದೀರಿ ? ನಿಮ್ಮ ಇಲಾಖೆಯ ಅಧಿಕಾರಿಗಳನ್ನೇ ಕಳುಹಿಸಿ, ಇರತಕ್ಕಂತಹ ರೂಲ್ಸ್ ಹಾಗೂ ಅದರ ಕಂಡೀಷನ್ ಅನ್ನು ನೋಡಿಕೊಂಡು ಕೊಡಿ. ಈಗ ನೀವು ಏನು ೩೦೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ವಿ.ಎಲ್. ಪಾಟೀಲ್.—ಮಾನ್ಯ ಸದಸ್ಯರು ಗಮನ ಸೆಳೆದಿದ್ದಾರೆ. ಅದನ್ನು ನಾನು ನೋಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೋಡುತ್ತೇನೆಂದರೆ ಹೇಗೆ? ಕೊಡುತ್ತೇನೆಂದು ಅರ್ಥವೋ? ಕೊಡುವುದಿಲ್ಲವೆಂಬ ಅರ್ಥವೋ ?

ಅಧ್ಯಕ್ಷರು.—ನೋಡುತ್ತೇವೆಂದರೆ, ಕನ್ಸಿಡರ್ ಮಾಡುತ್ತೇನೆ ಎಂದರ್ಥ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹೀಗೆ ಮಂತ್ರಿಗಳು ಉತ್ತರ ಕೊಟ್ಟರೆ ಹೇಗೆ ? ೨೦೦ ಹೆಣ್ಣುಮಕ್ಕಳಿಗೆ ತೊಂದರೆಯಾಗಿದೆ. ಒಂದು ಕಡೆ ಸಹಾಯ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಇನ್ನೊಂದು ಕಡೆ ಆದರ ಬಗ್ಗೆ ತಿಳುವಳಿಕೆ ಇಲ್ಲದೇ ಹೋದರೆ ಬಹಳ ತೊಂದರೆಯಾಗುತ್ತದೆ.

ಅಧ್ಯಕ್ಷರು.—ಆದರ ಬಗ್ಗೆ ಅವರಿಗೆ ಆಶ್ವಾದಾಯಕವಾದ ಉತ್ತರವನ್ನು ಕೊಡಿ.

ಶ್ರೀ ವಿ.ಎಲ್. ಪಾಟೀಲ್.—ನೋಡುತ್ತೇನೆ.

(ii) ತಮಿಳು ನಾಡಿಗೆ ನೀರನ್ನು ಬಿಡುಗಡೆ ಮಾಡಿರುವುದರಿಂದ ಕೃಷ್ಣರಾಜ ಸಾಗರದ ಆಚ್ಚುಕಟ್ಟು ಪ್ರದೇಶದ ರೈತರಿಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ಜಿ. ಮಾದೇಗೌಡ (ಕಿರುಗಾವಲು).—ಮಾನ್ಯ ಅಧ್ಯಕ್ಷರೆ, ತಮಿಳು ನಾಡಿಗೆ ನೀರನ್ನು ಬಿಡುಗಡೆ ಮಾಡಿರುವುದರಿಂದ ಕೃಷ್ಣರಾಜ ಸಾಗರದ ಆಚ್ಚುಕಟ್ಟು ಪ್ರದೇಶದ ರೈತರಿಗೆ ತೊಂದರೆಯಾಗಿರುವ ವಿಚಾರದ ಬಗ್ಗೆ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಸಚಿವರು).—ಮಾನ್ಯ ಅಧ್ಯಕ್ಷರೆ, ನಾನು ಈ ಹೇಳಿಕೆಯನ್ನು ಮಾಡಬಯಸುತ್ತೇನೆ.

ಕೃಷ್ಣರಾಜಸಾಗರದ ವಿಶ್ವೇಶ್ವರಯ್ಯ ನಾಲೆ ಮತ್ತು ಇತರೆ ಆಣೆಕಟ್ಟು ನಾಲೆಗಳ ಕೆಳಗೆ ಸುಮಾರು ೮೦,೦೦೦ ಎಕರೆ ಕಬ್ಬು ಬೆಳೆ ಇರುತ್ತದೆ. ಇದಲ್ಲದೆ ಅನಧಿಕೃತ ಭತ್ತ ಮತ್ತು ಅರೆ ಖುಷ್ಕಿ ಬೆಳೆ ಸುಮಾರು ೩೫,೦೦೦ ಎಕರೆ ಇರುತ್ತದೆ. ತಮಿಳುನಾಡು ಸರ್ಕಾರ ಕಾವೇರಿ ನದಿಯಿಂದ ನೀರಾವರಿಗೆ ನೀರು ಬಿಡಲು ಕೇಳಿಕೊಂಡಿತು.

ಪ್ರಧಾನ ಮಂತ್ರಿಗಳಿಂದ ಬಂದ ಒತ್ತಾಯ, ಕೇಂದ್ರ ಜಲ ಸಂಪನ್ಮೂಲ ಮಂತ್ರಿಯವರ ಕೋರಿಕೆ ನೆರೆ ರಾಜ್ಯಗಳೊಡನೆ ಮಧುರ ಬಾಂಧವ್ಯ ಇಟ್ಟುಕೊಳ್ಳುವ ಉದ್ದೇಶ ಮತ್ತು ಬರದ ಪ್ರಯುಕ್ತ ತಮಿಳು ನಾಡಿನ ರೈತರ ಭವಣೆ ಇವುಗಳನ್ನು ಗಮನದಲ್ಲಿಟ್ಟುಕೊಂಡು ಫೆಬ್ರುವರಿ ೧೫ರಿಂದ ತಮಿಳು ನಾಡಿಗೆ ೨ ಟಿ.ಎಂ.ಸಿ. ನೀರನ್ನು ಕೃಷ್ಣರಾಜಸಾಗರದಿಂದ ಬಿಟ್ಟಿದೆ. ಇದೇ ಪ್ರಮಾಣದ ನೀರನ್ನು ಹಾರಂಗಿ ಜಲಾಶಯದಿಂದ ಬಿಟ್ಟು ಕೃಷ್ಣರಾಜಸಾಗರ ಜಲಾಶಯಕ್ಕೆ ತುಂಬಿದೆ. ಈಗ ಕೃಷ್ಣರಾಜ ಸಾಗರದ ನೀರಿನ ಮಟ್ಟ ೧೦೦.೬೦ ಅಡಿ ಇದ್ದು ನಿವ್ವಳ ಜಲಸಂಗ್ರಹಣೆ ೧೪.೯೧ ಟಿಎಂಸಿ ಇರುತ್ತದೆ. ಜಲಾಶಯದಲ್ಲಿ ಈಗ ಇರುವ ನೀರು ಮತ್ತು ೩೧-೫-೮೬ರವರೆಗೆ ಲೆಕ್ಕಾಚಾರದಂತೆ ಬರುವ ನೀರು ಸೇರಿ ೩೧-೫-೮೬ರ ತನಕ, ಹಾಲಿ ನಿಂತಿರುವ ಕಬ್ಬು ಮತ್ತು ಇತರೇ ಬೆಳೆಗಳ ಹಾಗೂ ಮೈಸೂರು ಮತ್ತು ಇತರ ಪಟ್ಟಣಗಳ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ಸಾಕಾಗುತ್ತದೆ. ಆದುದರಿಂದ ತಮಿಳು ನಾಡಿಗೆ ೨ ಟಿಎಂಸಿ ನೀರನ್ನು ಹಾರಂಗಿ ಜಲಾಶಯದಿಂದ ಕೃಷ್ಣರಾಜ ಸಾಗರದ ಮುಖಾಂತರ ಬಿಟ್ಟಿರುವುದರಿಂದ ಹಾಲಿ ನಿಂತಿರುವ ಬೆಳೆಗಳಿಗೆ ದಕ್ಕೆ ತಗಲುವುದಿಲ್ಲ. ಹಾರಂಗಿ ಯೋಜನೆಯ ಅಧಿಕೃತ ಬೆಳೆಗಳಿಗೂ ದಕ್ಕೆ ಬರುವುದಿಲ್ಲ.

ಬರಗಾಲ ಸಮಯದಲ್ಲಿ ಸ್ವಲ್ಪ ಕಷ್ಟ ಉಂಟಾಗುವುದು ಸಹಜ. ಆದಾಗ್ಯೂ ಎಲ್ಲಾ ಸದಸ್ಯರಿಗೂ ತಿಳಿದಿರುವಂತೆ ನಮ್ಮ ರಾಜ್ಯವು ಸತತವಾಗಿ ನಾಲ್ಕನೇ ಬಾರಿ ಬರ ಅನುಭವಿಸುತ್ತಿದ್ದರೂ ಕೃಷ್ಣರಾಜ ಸಾಗರದ ಆಚ್ಚುಕಟ್ಟುದಾರರಿಗೆ ಎರಡು ಬೆಳೆಗಳಿಗೆ ನೀರು ಕೊಡುತ್ತಲೇ ಬಂದಿದ್ದೇವೆ.

†ಶ್ರೀ ಜಿ. ಮಾದೇಗೌಡ.—ಮಂತ್ರಿಗಳು ಬಹಳ ಸೂಕ್ಷ್ಮವಾಗಿ ಸಣಕುಚಿಕೊಳ್ಳತಕ್ಕ ಉತ್ತರವನ್ನು ಕೊಟ್ಟಿದ್ದಾರೆಂದು ಭಾವಿಸುತ್ತೇನೆ. ಅನಧಿಕೃತ ಭತ್ತದ ಬೆಳೆ ಮತ್ತು ರಾಗಿ ಬೆಳೆ ಇದೆ ಎಂದು ಉತ್ತರಿಸಿದ್ದಾರೆ. ಕೆ.ಆರ್.ಎಸ್ ಆಚ್ಚುಕಟ್ಟು ಪ್ರದೇಶದಲ್ಲಿ ಒಂದು ಲಕ್ಷದ ೨೦ ಸಾವಿರ ಎಕರೆ ನೀರಾವರಿ ಪ್ರದೇಶ ಇದ್ದು ಬೇಸಿಗೆ ಮತ್ತು ಮುಂಗಾರು ಬೆಳೆಗಳನ್ನು ಬೆಳೆಯುವುದಕ್ಕೆ ಅವಕಾಶ ಇದೆ. ಅಂದಾಗ

** ಈ ಪದಗಳನ್ನು ವೈಸ್-ಛೇರ್ಮನ್‌ರವರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿರುತ್ತದೆ.